# ಬಿಳಿ ಮೆಹೆಂದಿ ನೋಡಿದ್ದೀರಾ?



**ಮೆಹೆಂದಿ ಹಚ್ಚಿಕೊಳ್ಳುವುದು ಹಬ್ಬ ಹರಿದಿನ, ಶುಭ ಸಮಾರಂಭಗಳಲ್ಲಿ ಭಾಗವಹಿಸುವಾಗ. ಇದೀಗ ಮೆಹೆಂದಿಯಲ್ಲೂ ಫ್ಯಾನ್ಸಿ ವೈವಿಧ್ಯ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಬಿಳಿ ಬಣ್ಣದ ಮೆಹೆಂದಿ ಎಲ್ಲರ ಮೆಚ್ಚು ಕೂಡ ಆಗಿದೆ. ಇದು ಇನ್‌ಸ್ಟಂಟ್ ಆಗಿದ್ದು, ಬೇಗನೆ ಹಾಕಿಕೊಳ್ಳಬಹುದು.**

**■ ಆಶಾ ಎಸ್‌. ಕುಲಕರ್ಣಿ**

ಶ್ರಾವಣಮಾಸ ಆರಂಭವಾಗುತ್ತಿದ್ದಂತೆ ಸಮಾರಂಭಗಳ ಅಧ್ಯಾಯ ಪ್ರಾರಂಭವೆಂದೇ ಅರ್ಥ. ಹಬ್ಬ ಹರಿದಿನಗಳಿದ್ದಾಗ, ಶುಭ ಸಮಾರಂಭಗಳಿದ್ದಾಗ ಮೆಹೆಂದಿ ಆಲಂಕಾರಿಕವಾಗಿ ಪ್ರಮುಖ ಪಾತ್ರ ವಹಿಸುತ್ತದೆ. ಮೆಹೆಂದಿ ಹಚ್ಚಿಕೊಂಡು, ಅದರ ಅಂದ ನೋಡಿಕೊಂಡು ಅಡ್ಡಾಡುವುದೇ ಮಹಿಳೆಯರಿಗೆ ಸಂಭ್ರಮದ ಕ್ಷಣಗಳೆನಿಸುತ್ತದೆ. ಈ ಸಂಭ್ರಮಕ್ಕೆ ಮತ್ತಷ್ಟು ಮೆರುಗು ನೀಡಲೆಂದೇ ಇದೀಗ ಫ್ಯಾಷನಬಲ್ ಮೆಹೆಂದಿ ಮಾರುಕಟ್ಟೆಗೆ ಬಂದಿದೆ. ಅದರಲ್ಲೂ ಬಿಳಿ ಮೆಹೆಂದಿ ಸಖತ್ ಲುಕ್ ಕೊಡುತ್ತದೆ. ಇಂತಹ ಬಿಳಿ ಬಣ್ಣದ ಮೆಹೆಂದಿ ಎಲ್ಲ ಉಡುಪಿಗೂ ಮ್ಯಾಚ್ ಆಗುವಂಥದ್ದೇ ಆಗಿದೆ.

ಹಾಗೆ ನೋಡಿದರೆ ಬಿಳಿ ಮೆಹೆಂದಿ ಇದೀಗ ಫ್ಯಾಷನ್ ಟ್ರೆಂಡ್ ಆಗಿದ್ದು, ಯುವತಿಯರು ಇದಕ್ಕೇ ಹೆಚ್ಚು ಆದ್ಯತೆ ನೀಡುತ್ತಿದ್ದಾರೆ, ಸಾಮಾಜಿಕ ಜಾಲತಾಣಗಳಲ್ಲಿಯೂ ಬಿಳಿ ಮೆಹೆಂದಿ ಹಾಕಿಸಿಕೊಂಡ ಮಹಿಳೆಯರು ಫೋಟೊ ತೆಗೆದುಕೊಂಡು ಪೋಸ್ಟ್ ಮಾಡಿ ಗೆಳತಿಯರಿಂದ ಪ್ರಶಂಸೆ ಗಳಿಸುತ್ತಿರುವುದು ಸಾಮಾನ್ಯ ಸಂಗತಿಯಾಗಿಬಿಟ್ಟಿದೆ.

ಬಿಳಿ ಮೆಹೆಂದಿಯ ಹೊಸ ವಿನ್ಯಾಸಗಳು ಟ್ರೆಂಡ್ ಎನಿಸಿದರೂ ಕೆಲ ಸಾಂಪ್ರದಾಯಿಕ ಮನೋಭಾವದ ಮಹಿಳೆಯರಿಗೆ ಈ ವಿನ್ಯಾಸಗಳು ಮನಸ್ಸಿಗೆ ಹಿತವೆನಿಸುವುದಿಲ್ಲ. ಏಕೆಂದರೆ ಮೆಹೆಂದಿ ಶಾಸ್ತ್ರ ಎಂದರೆ ಅದು ಫ್ಯಾಷನಬಲ್ ಆಗಿರಕೂಡದು, ಸಾಂಪ್ರದಾಯಿಕ ಲುಕ್ ಅನ್ನೇ ಪ್ರತಿಬಿಂಬಿಸಬೇಕು ಎಂಬುದು ಕೆಲ ಮಹಿಳೆಯರ ಮನದಿಂಗಿತ. ಹೀಗಾಗಿ ಮದುವೆಯಂತಹ ಶಾಸ್ತ್ರೋಕ್ತ ಕಾರ್ಯಕ್ರಮಗಳಿಗೆ ಮಾಮೂಲಿ ಮೆಹೆಂದಿಗೇ ಆದ್ಯತೆ ನೀಡುತ್ತಿರುವುದು ಸುಳ್ಳಲ್ಲ.

ಆಧುನಿಕ ಮನೋಭಾವದ ಯುವತಿಯರಿಗೆ ಬಿಳಿ ಮೆಹೆಂದಿ ಇಷ್ಟ. ಇದು ಉಡುಪಿಗೆ ಸಖತ್ತಾಗಿ ಹೊಂದಿಕೊಳ್ಳುತ್ತದೆ ಎಂಬುದು ಫ್ಯಾಷನ್ ಪ್ರಿಯರ ಮಾತು ಕೂಡ ಹೌದು. ಈ ಬಿಳಿ ಮೆಹೆಂದಿ ಕೋನ್‌ಗಳನ್ನು ಸ್ವತಃ ಮನೆಯಲ್ಲಿಯೇ ತಯಾರಿಸಿಕೊಳ್ಳಬಹುದು. ಇದನ್ನು ಮಾಡುವ ವಿಧಾನ ಯೂಟ್ಯೂಬ್‌ನಲ್ಲಿ ಲಭ್ಯ.

ಮುಖಕ್ಕೆ ಬಳಸುವ ಫೌಂಡೇಷನ್ ಕ್ರೀಂ ಹಾಗೂ ಪೌಡರ್ ಅನ್ನು ಕಲಸಿಕೊಂಡು, ಕೋನ್‌ಗೆ ತುಂಬಿಸಿಕೊಳ್ಳಬೇಕು. ಇದನ್ನು ಹಚ್ಚಿಕೊಳ್ಳಬಹುದು, ಬಳಿಕ ಸಾಬೂನಿನಿಂದ ಕೈ ತೊಳೆದುಕೊಂಡರೆ ಇದು ಅಳಿಸಿಹೋಗುತ್ತದೆ. ಆಧುನಿಕ ಉಡುಪುಗಳಾದ ಜೀನ್ಸ್, ಮಿಡಿ, ಸ್ಕರ್ಟ್ ತೊಟ್ಟಾಗ ಕೈಗಳಲ್ಲಿನ ಈ ಬಿಳಿ ಬಣ್ಣದ ವಿನ್ಯಾಸಗಳು ಬೋಲ್ಡ್ ಲುಕ್

### ಮೆಹೆಂದಿ ಬಳಸುವವರಿಗೆ ಟಿಪ್ಸ್

- ಮೆಹೆಂದಿ ಹಚ್ಚಿಕೊಳ್ಳುವ ಮುನ್ನ ಕೈಯನ್ನು ತೊಳೆದು, ಹಚ್ಚುವ ಭಾಗಕ್ಕೆ ಟೋನರ್ ಅಥವಾ ಆಸ್ಟ್ರೋಜೆಂಟ್ ಹಚ್ಚಿದರೆ ಅದು ಕೈಯಲ್ಲಿರುವ ಎಣ್ಣೆಯಂಶ ಅಥವಾ ಜಿಡ್ಡಿನಂಶವನ್ನು ತೆಗೆದು ಕೈಗೆ ಮೆಹೆಂದಿ ಚೆನ್ನಾಗಿ ಹಿಡಿಯುವಂತೆ ಮಾಡುತ್ತದೆ.
- ಮೆಹೆಂದಿ ವಿನ್ಯಾಸವನ್ನು ಸ್ವಲ್ಪ ದಪ್ಪ ಎಳೆಯಲ್ಲಿ ಹಾಕಿದರೆ ವಾಸಿ. ಇದು ಬೇಗ ಮಾಸುವುದಿಲ್ಲ.
- ಮೆಹೆಂದಿ ಹಚ್ಚಿಕೊಂಡ ನಂತರ ಅದನ್ನು ಬೇಗನೆ ತೆಗೆಯಬೇಡಿ, ಕನಿಷ್ಠ 2 ಗಂಟೆ ಕಾಲ ಒಣಗಲು ಬಿಟ್ಟು ತೆಗೆಯಬೇಕು. ಇಲ್ಲದಿದ್ದರೆ ಬಣ್ಣ ಗಾಢವಾಗಿ ಬರುವುದಿಲ್ಲ.